ಸ್ಕೀಮ್‌ನ ಟೈಲರಿಂಗ್ ಕ್ಲಾಸ್‌ಗೆ ಹಾಕಿದ್ದಳು. ಹೀಗೇ... ಮುಚ್ಚಿದ ಕಣ್ಣಲ್ಲಿ ತನ್ನ ಸಂಕಟಗಳನ್ನು ಮುರಿಯುತ್ತಾ ಮಲಗಿದ್ದಳು ಮಂಗಳಮ್ಮ. ಮನೆಗೆ ಬಂದ ಮಗಳ ಹೆಜ್ಜೆ ಸಪ್ಪಳಕ್ಕೆ ಮೆಟ್ಟುಬಿದ್ದು ಎದ್ದಳು. ಕುಳಿತು ಕಣ್ಣುಜ್ಜಿ ಅರೆ ಸಿಗ್ಗು, ಅರೆ ಬಿಂಕವ ಮಗಳಿಗೆ ಮರೆಮಾಚುತ್ತಾ ಅಡುಗೆ, ಒಲೆ ಬೂದಿ ಎಂದು ಆಚೆಗೆ ಹೋದಳು. ಈಕೆಯ ಬದುಕಲ್ಲಿ ಈಗ ಬೆಂಗಳೂರಿನ ಗ್ಯಾಸ್ ಸಿಲಿಂಡರ್ ನೀಲಿ ಜ್ವಾಲೆಗಳು ಇಲ್ಲವಾಗಿ, ಮುಗಳೂರಿನ ಸೌದೆ ಒಲೆಯ ಕೆಂಪು ಜ್ವಾಲೆಗಳು ತುಂಬಿಕೊಂಡಿದ್ದವು.

ಅಂದು ಉಂಡು ಮಲಗಿದಾಗ ಕತ್ತಲೆಗೆ ಬಿಟ್ಟ ಕಣ್ಣುಗಳ ರೆಪ್ಪೆ ಹೊರಳಲ್ಲಿ ನೀರುಕ್ಕಿ ಈಕೆಯ ಎರಡೂ ಭುಜಗಳ ಮೇಲೆ ಇಳಿಯುತ್ತಿದ್ದವು. ಯಾವುದೋ ಭರವಸೆ ಗೆರೆಗೆರೆಗಳಾಗಿ ತನ್ನೊಳಗೆ ಇಳಿದಂತಾಗಿ ಹಿಗ್ಗು ಮೂಡಿಸುವಂತೆ ಕಾಣುತ್ತಿತ್ತು. ಪಾಪ ನಾಗ್ರಾಜ...! ಮಗ್ಗಿಕಾಗುಣಿತವ ರಾಗವಾಗಿ ಹೇಳುತ್ತಿದ್ದವನು. ಮುಂದೆ ಕುಳಿತು ಪರೀಕ್ಷೆ ಬರೆವಾಗ ಹಿಂದಿದ್ದವನು; ಮಂಗಳಮ್ಮ ರಟ್ಟ ರವಷ್ಟು ಇತ್ತಿಡಿ ಎಂದು ಕಾಡುತ್ತಿದ್ದವನು. ಆಡಿನ ಕಣ್ಣುಗಳಂತೆ ತೇಲು ನೋಟದವನು. ಪರೀಕ್ಷೆ ಇನ್ನಿಷ್ಟು ದಿನವಿದೆ ಎನ್ನುವಾಗಲೇ ತಾಂಡಾದ ಜನ ಸಂಗ್ರಹಿಸುತ್ತಿದ್ದ ಜೇನು, ಗುಮ್ಮಟಿ, ಕಾರೆ, ಎಲಚಿ, ಬಾರೆ ಹಣ್ಣುಗಳನ್ನು ತಂದುಕೊಡುತ್ತಿದ್ದವನು. ಓದಿ ಎಷ್ಟು ದೊಡ್ಡವನಾಗಿದ್ದಾನೆ. ಕತ್ತಲೆಗೆ ಕೇಳಿಸುವಂತೆ ಸ್ವಲ್ಪ ಏರುಸ್ವರದಲ್ಲೇ ಉದ್ಗರಿಸಿಕೊಂಡಳು. ತನ್ನುದ್ಗಾರದ ಸದ್ದಿಗೆ ತಾನೇ ಗಾಬರಿಗೊಂಡು ಮಲಗಿದ್ದ ಮಗಳ ಮುಖವನ್ನೊಮ್ಮೆ ಕತ್ತೆತ್ತಿ ದಿಟ್ಟಿಸಿ ಮಗ್ಗಲು ಬದಲಿಸಿದಳು.

ನೆನಪಿನ ನದಿ; ಮಗ್ಗಲು ಬದಲಿಸಿದರೂ ಅದರ ದಿಕ್ಕು ಬದಲಾಗಲಿಲ್ಲ. ಆಗಲೇ ಮಕ್ಕಳನ್ನು ವೀಕೆಂಡ್ ಓಡಾಟಕ್ಕೆ ಕರೆದುಕೊಂಡು ಮೈಸೂರಿಗೆ ಹೋಗಿದ್ದಾಗ ಆಗಷ್ಟೇ ಮದುವೆಯಾಗಿದ್ದ ನಾಗರಾಜ ಹೆಂಡತಿಯೊಂದಿಗೆ ಝೂನ ಚಿಂಪಾಂಜಿ ಸ್ಟಾಂಡ್ ಬಳಿ ಅನಿರೀಕ್ಷಿತವಾಗಿ ಸಿಕ್ಕಿದ್ದ. ಮಂಗಳಮ್ಮನನ್ನು ಗುರುತು ಹಿಡಿದು ಕೈಮುಗಿದು ನಮಸ್ಕರಿಸಿ, ಹೆಂಡತಿಯನ್ನು ಪರಿಚಯಿಸಿದ್ದ. ಓಡಿ ಬಂದು ಹೋಟೆಲ್ ಸಪ್ಲೈಯರ್ ಆಗಿ, ಆ ಕೆಲಸದಿಂದ ಜಂಪ್ ಮಾಡಿ ಎಲೆಕ್ಟ್ರಿಕಲ್ ಕಾಂಟ್ರಾಕ್ಟರ್ ಬಳಿ ಹೆಲ್ಪರ್ ಕೆಲಸ ಹಿಡಿದು, ಕೊನೆಗೆ ಲೈಸೆನ್ಸ್ ಹೋಲ್ಡರ್ ಆಗಿ, ಕಾಂಟ್ರಾಕ್ಟರ್ ಹನುಮಂತರಾಯ ಎಂ.ಎಸ್. ರಾಯ್ ಆಗಿ, ಕಾರುಮನೆಗೆ ಓನರ್ ಆಗಿದ್ದ ಗಂಡನಿಗೆ ಮನೆ ಬಿಟ್ಟು ಈಚೆಗೇ ಬಾರದ ಹೆಂಡತಿಗೆ ಬಿದ್ದ ವಿನಮ್ರ ನಮಸ್ಕಾರ ಗಾಬರಿ ಹುಟ್ಟಿಸಿತ್ತು. ಆಗ ಕೂಲಾಗಿ ಮಂಗಳಮ್ಮನೇ ಮುಗಳೂರು ತಾಂಡಾದ ನಾಗರಾಜನ ಪರಿಚಯ ಹೇಳಿ, ಆ ದಿನಗಳ ರಾಗದ ಮಗ್ಗಿ, ಪರೀಕ್ಷೆಯ ಪಡಿಪಾಟಲು ಘಟನೆಗಳನ್ನು ನೆನಪಿಸಿ ನಗಾಡಿದ್ದಳು. ನಾಗರಾಜನ ಹೆಂಡತಿಯೂ ಬಿದ್ದು ಬಿದ್ದು ನಕ್ಕಿದ್ದಳು.

ತನ್ನ ಜರ್ನಿಯ ಬಗ್ಗೆ ಹೆಮ್ಮೆಯಿದ್ದ ರಾಯ್, ತಾಂಡಾದಲ್ಲಿ ಯಾರ ಮಗನೆಂದು ವಿಚಾರಿಸಿದ್ದ. ಓಹ್ ಜುಮ್ಮಾ ನಾಯ್ಕನ ಮಗನಾ ಎಂದು ಉದ್ಗರಿಸಿದ್ದ. ಇಡೀ ದಿನ ತನ್ನ ಸ್ಯಾಂಟ್ರೊ ಕಾರಿನಲ್ಲೇ ಅವರನ್ನು ಮೈಸೂರು ಸುತ್ತಾಡಿಸಿ, ತನ್ನ ಪೂರ್ಣ ಬಯೊಗ್ರಫಿಯನ್ನು ನಾಗರಾಜನಿಗೆ ಮನದಟ್ಟು ಮಾಡಿಸಿದ್ದ. ಕೊನೆಗೆ ಹನುಮಂತು ಹೋಟೆಲ್ ಬಿರಿಯಾನಿ ಕೊಡಿಸಿ ನವದಂಪತಿಗಳನ್ನು ಬೀಳ್ಕೊಟ್ಟಿದ್ದ. ಇದಾದ ಬಹಳ ವರ್ಷಗಳ ನಂತರ, ನಾಗರಾಜನ ಮುಖ ಮತ್ತೆ ಕಾಣಿಸಿದ್ದು ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ಸ್ಟಾಂಡ್‌ನಲ್ಲಿ. ಎಂ.ಎಸ್. ರಾಯ್ ತನ್ನ ಬದುಕಿನ ಕೊನೆಯ ಹತ್ತು ವರ್ಷಗಳಲ್ಲಿ ಬಹುವಾಗಿ ನಂಬಿಕೆ ಇಟ್ಟುಕೊಂಡಿದ್ದು ಖಡಕ್ ಟಿವಿಯ ಜ್ಯೋತಿಷಿಗಳಾದ ಸತ್ಯನಾರಾಯಣ ಶಾಸ್ತ್ರಿ ಉರುಫ್ ಎಸ್ಸೆನ್ ಶಾಸ್ತ್ರಿಗಳ ಮೇಲೆ. ಅವರ ಕೊಟ್ಟಕೊನೆಯ ಆದೇಶ ಪಾಲಿಸಲು ಮುಗಳೂರಿಗೆ ಹೊರಟಿದ್ದಾಗ. ನಾಲ್ಕು ವರ್ಷಗಳ ಹಿಂದೆ ಕಾಣಿಸಿಕೊಂಡ ನರರೋಗದ ನರಳಿಕೆಗೆ ಏಕಕಾಲಕ್ಕೆ ಆಸ್ಪತ್ರೆ ಚಿಕಿತ್ಸೆ, ಜ್ಯೋತಿಷ್ಯ ಚಿಕಿತ್ಸೆಗಳ ಪ್ರಯೋಗಗಳಿಂದ ಎಂ.ಎಸ್. ರಾಯ್‌ನ ಕಾರು, ಒಡವೆಗಳೆಲ್ಲ ಖಾಲಿಯಾಗಿದ್ದವು.

ಕೊನೆಯ ವರ್ಷದಲ್ಲಿ ನವಮಾಸಗಳ ನವಗ್ರಹ ಚಿಕಿತ್ಸಾ ಹೋಮಹವನಗಳ ಕಾರ್ಯಾರ್ಥ ಇದ್ದ ಮನೆಯನ್ನು ಭ್ರಷ್ಟರ ಬೇಟೆ ವಾರಪತ್ರಿಕೆಯ ಓನರ್, ದಾಸರಹಳ್ಳಿಯ ಪ್ರಭಾವಿ ವ್ಯಕ್ತಿ ಶಂಭು ನಾಯ್ಡುರ ಬಳಿ ಹತ್ತು ಪರ್ಸೆಂಟ್ ಬಡ್ಡಿಗೆ ಸೇಲ್ ಡೀಡ್ ಅಡಮಾನವಿಟ್ಟು ಹತ್ತು ಲಕ್ಷಗಳ ಸಾಲ ಪಡೆಯಲಾಗಿತ್ತು. ಇಡೀ ಒಂಬತ್ತು ತಿಂಗಳು ವಾರಗಟ್ಟಲೆ ಒಂಬತ್ತು ಬಾರಿ ಹೋಮ ಯಾಗಗಳಿಗೆ, ಅನ್ನ ಸಂತರ್ಪಣೆಗೆ, ವರ್ಷಗಟ್ಟಲೆ ಮನೆಯ ನೆಂಟರಿಷ್ಟರಿಂದ ಗಿಜಿಗುಡುತ್ತಿದ್ದ ರಾಕುದೇಖಿಗೆ ಸಾಲ ಮತ್ತೈದು ಲಕ್ಷ ರೂಪಾಯಿ ಏರಿತ್ತು. ಎಲ್ಲ ಮುಗಿದು ಕೊನೆಯಾದಾಗ ಶಾಸ್ತ್ರಿಗಳು ರಾಯ್‌ನ ಸ್ವರ್ಗಕ್ಕೆ ಸೇರಿಸುವ ಜವಾಬ್ದಾರಿ ಹೊತ್ತು, ಮಾಡೋದೆಲ್ಲ ಮಾಡಿಯಾಯ್ತು. ಕೊನೆಯುಸಿರಲ್ಲಿ ಮನೆದೇವರ ಅನುಗ್ರಹವಾದರೂ ಸಿಗಲಿ ಇವನಿಗೆ. ಊರಿಗೋಗಿ ಗಂಗಮ್ಮ ದೇವಿಗೆ ಈತನ ಕೈಲಿ ಮಡಿಪೂಜೆ ಮಾಡಿಸಿ ಬಿಡಿ ಎಂದಿದ್ದರು.

ಈ ಕಾರಣಾರ್ಥವಾಗಿಯೇ ಮಂಗಳಮ್ಮ ಮಗಳ ನೆರವಿನೊಂದಿಗೆ ಆಜಮಾಸು ಸ್ಟ್ರೋಕ್ ಹೊಡೆದು ನಾಲಿಗೆ, ನರತ್ರಾಣ, ಬ್ಯಾಲೆನ್ಸ್ ಎಲ್ಲವನ್ನೂ ಕಳೆದುಕೊಂಡಿದ್ದ ರಾಯ್‌ನ ಮೆಜೆಸ್ಟಿಕ್‌ಗೆ ಸಾಗಿಸಿಕೊಂಡು ಬಂದಿದ್ದು. ಕಲ್ಲು ಬೆಂಚಿನ ಮೇಲೆ ಅಪ್ಪನಾಸರೆಗೆ ಮಗಳನ್ನು ಕೂರಿಸಿ, ಬಂದ ಬಂದ ಬಸ್ಸುಗಳ ಮೇಲೆಲ್ಲ ಪಾವಗಡದ ಬೋರ್ಡ್ ಹುಡುಕುತ್ತಿದ್ದಾಗಲೇ ನಾಗರಾಜ ಕಣ್ಣಿಗೆ ಬಿದ್ದದ್ದು. ನಾಗರಾಜ, ಮಂಗಳಮ್ಮ.. ಹೇss.. ನಮ್ಮ ಇಲಾಖೆ ಕೆಲ್ಸ ಇತ್ತು. ಬೆಂಗ್ಳೂರಿಗೆ ಬಂದಿದ್ದೆ. ನೀವು ಏನು ಇಲ್ಲಿ? ಎಂದ. ಮಂಗಳಮ್ಮನ ಕಣ್ಣುಗಳು ತೇಲುತೇಲಾಗಿ ಸಾವಿರ ಕತೆಗಳನ್ನು ಒಮ್ಮೆಗೇ ಹೊಮ್ಮಿಸುವಂತಾದವು. ನಿಸ್ತೇಜವಾಗಿ ಚಲಿಸಿದ ಬಲಗೈ, ಗಂಡಮಗಳು ಕುಳಿತಿದ್ದ ಬೆಂಚ್‌ನ ಕಡೆಗೆ ಕೈಮರವಾಯಿತು. ಮುದ್ದು ಬೊಂಬೆಯಂಥ ಮಗಳು ಟವೆಲ್‌ನಲ್ಲಿ ಅಪ್ಪನ ಮೂತಿಯ ಜೊಲ್ಲನ್ನು ಒರೆಸುತ್ತಿದ್ದಳು.

ಇಬ್ಬರೂ ಆ ಕಡೆಗೆ ಹೊರಟರು. ನಾಗರಾಜ ಗಾಬರಿ ಬಿದ್ದು, ಮಂಗಳಮ್ಮನ ಕಣ್ಣುಗಳನ್ನು ಪ್ರಶ್ನಾರ್ಥಕವಾಗಿ ದಿಟ್ಟಿಸಿದ. ಮನೆಯಲ್ಲಿ ಜಾತ್ರೆ ಮಾಡಿ, ಕೊನೆಗಾಲಕ್ಕೆ ಕಣ್ಣು ತಪ್ಪಿಸಿ ಓಡಿ ಹೋದ ನೆಂಟರಿಷ್ಟರ ಮುಖಗಳು ಅವಳಲ್ಲಿ ಸರಿದಾಡಿದವು. ಕಟ್ಟೆಯೊಡೆದಂತೆ ರೋಗ ಕಂಡ ದಿನದಿಂದ, ಕೊನೆಯ ಮಡಿಪೂಜೆಯ ತನಕ ಎಲ್ಲವನ್ನೂ ಒಂದೇ ಉಸಿರಿನಲ್ಲಿ ಕಣ್ಣೀರು ಸುರಿಸುತ್ತಾ ಗಂಟೆಯಷ್ಟು ಕಾಲ ಬಾಯಲ್ಲಿ ಹರಿಸಿದಳು. ಹೌಹಾರಿದ ನಾಗರಾಜ, ಬಟ್ಟೆ ಸುತ್ತಿದ ಕೋಲಿನಂತಿದ್ದ ರಾಯ್ ಕಡೆಗೊಮ್ಮೆ ನೋಡಿ, ತಣ್ಣೀರು ಮೈಗೆ ಸೋಕಿದ ತಕ್ಷಣವೇ ರಾಯಣ್ಣ ಸಾಯ್ತಾನೆ ಎಂದು ಉದ್ಗರಿಸಿದ್ದ. ಬಹಳೊತ್ತು ಮಗಳಿಗೆ, ಮಂಗಳಮ್ಮನಿಗೆ ವಿವರಿಸಿ, ತನ್ನ ಬ್ಯಾಗ್‌ನಿಂದ ಪಾಂಪ್ಲೆಟ್ ಒಂದನ್ನು ತೆಗೆದು ವಿಕ್ಟೋರಿಯಾ ಆಸ್ಪತ್ರೆಯ ಡಾಕ್ಟರ್ ನಂಬರ್ ಒತ್ತಿ ಮಾತನಾಡಿದ್ದ.

ಕೊನೆಗೆ ಆಟೊ ಹತ್ತಿಸಿ, ನಾನೂ ಬರಲೇ ಎಂದಿದ್ದ ಮಂಗಳಮ್ಮ ಬೇಡವೆನ್ನುವಂತೆ ಕತ್ತಾಡಿಸಿದ್ದಳು. ಅಲ್ಲಿಗೋದ ಐದಾರು ದಿನಗಳಲ್ಲಿ ಎಲ್ಲಾ ಪರೀಕ್ಷೆಗಳನ್ನೂ ಮುಗಿಸಿದ ಡಾಕ್ಟರ್‌ಗಳು, ಇದು... ಇದು... ಎನ್ನುತ್ತಾ, 'ಈ ಹಂತದಲ್ಲಿ ಚಿಕಿತ್ಸೆ ಕಷ್ಟ. ಬಾಡಿಯಲ್ಲಿ ರೇಬಿಸ್ ರೋಗಾಣುಗಳು ಆವರಿಸಿವೆ. ಬಾಲ್ಯದಲ್ಲಿ ಹುಚ್ಚು ನಾಯಿ ಕಚ್ಚಿರಬೇಕು. ಹಳ್ಳಿ ಜನ ಏನೋ ನಾಟಿ ಔಷಧಿ ಹಾಕಿರುತ್ತಾರೆ. ಇವರ ಬಾಡಿಯಲ್ಲಿ ಆಗ ಮೂರ್ಛೆಗೊಂಡ ಅವು, ಈಗ ಮತ್ತೆ ಎಚ್ಚೆತ್ತುಕೊಂಡು ಆವರಿಸಿವೆ. ಕೊಟ್ಟ ಔಷಧಿಗಳನ್ನು ದಕ್ಕಿಸಿಕೊಳ್ಳುವ ಶಕ್ತಿ ಇವರ ದೇಹಕ್ಕೆ ಈಗಿಲ್ಲ, ಸ್ಸಾರಿ' ಎಂದರು.

ಎಲ್ಲ ಮುಗಿದು ಈಗ್ಗೆ ನಾಲ್ಕು ವರ್ಷಗಳಾದವು. 'ಈಗ ನಾಗರಾಜನನ್ನು ಏನು ಸಹಾಯ ಕೇಳಲಿ?' ಮಾರನೆಯ ದಿನ ಪೇಟೆ ವ್ಯಾಪಾರ ಮುಗಿಸಿ ಪೋಸ್ಟಾಫೀಸಿಗೆ ಹೋದ ಅವಳು ಬರೆದು ಡಬ್ಬಕ್ಕೆ ಹಾಕಿದ್ದು ಒಂದೇ ಸಾಲು: ನನ್ನ ಮಗಳನ್ನು ಕಾಲೇಜಿಗೆ ಸೇರಿಸುವ ವ್ಯವಸ್ಥೆ ಮಾಡಲು ಆಗುತ್ತಾ?

ಇಂತಿ,

ಮಂಗಳಮ್ಮ, ಮುಗಳೂರು

ಪ್ರತಿಕ್ರಿಯಿಸಿ: feedback@sudha.co.in

